<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ</u>

**<u>FDP-3/2016</u>**

**CW-1**

**ಹೆಸರುಃ** **ಇಬ್ರಾಹಿಂ ತಳಗೇರಿ.**

**ತಂದೆಃ** ಇಮಾಮ್ ಸಾಬ್ .

**ವಯಸ್ಸುಃ** **52** ವರ್ಷ.

**ಕೆಲಸಃ** ತಾಲೂಕು ಸರ್ವೇಯರ್.

**ವಾಸಃ** ಎ.ಡಿ.ಎಲ್.ರ್ ಆಫೀಸ್ ಹರಿಹರ .

ಇಂದು ದಿನಾಂಕ**:07-04-2025**<u> ರಂದು ಸಾಕ್ಷಿಯನ್ನು **ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

ಮುಖ್ಯ ವಿಚಾರಣೆಃ ಶ್ರೀ ಎಂ.ಎಂ.ಹೆಚ್ ವಕೀಲರಿಂದ ಅರ್ಜಿದಾರರ ಪರಃ

ನಾನು ಕಳೆದ 11 ವರ್ಷಗಳಿಂದ ಎ.ಡಿ.ಎಲ್.ಆರ್ ಕಚೇರಿ ಹರಿಹರದಲ್ಲಿ ಸರ್ವೆಯರ್ ಎಂದು ಕರ್ತವ್ಯ ನಿರ್ಹಿಸುತ್ತಿದ್ದೇನೆ. ದಿನಾಂಕಃ13-07-2022 ರಂದು ನಾನು ಕಮೀಷನ್ ಕೆಲಸ ಪೂರೈಯಿಸಿರುತ್ತೇನೆ. ನನ್ನ ವರದಿ ಸಲ್ಲಿಸಿರುತ್ತೇನೆ. ಸದರಿ ಕಮೀಷನ್ ವರದಿಯನ್ನು ನಿ.ಸಿ-1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಅನುಮತಿ ಕೇಳಿದ್ದು, ನೀಡಲಾಯಿತು.)

ಪಾಟೀ ಸವಾಲು ಶ್ರೀ ಎಂ.ಎಂ.ಹೆಚ್ ವಕೀಲರಿಂದ ಅರ್ಜಿದಾರರ ಪರಃ

ಕಮೀಷನ್ ವಾರೆಂಟ್ ಹೊಟ್ಟಿಗೇನಹಳ್ಳಿ ಸರ್ವೆ ನಂಬರ್ 19, ಕೆಂಚನಹಳ್ಳಿ ಸರ್ವೆ ನಂಬರ್ 14 ಮತ್ತು 15 ರ ಕುರಿತು ನನಗೆ ಬಂದಿರುತ್ತದೆ. ಕಮೀಷನ್ ವಾರೆಂಟ್ ನಲ್ಲಿ ಏನು ಕಮೀಷನ್ ಕೆಲಸ ಮಾಡಬೇಕು ಎಂದು

ನಮೂದು ಇತ್ತು ಎಂದರೆ ಸರಿ. ಕಮೀಷನ್ ವಾರೆಂಟ್ ನಲ್ಲಿ ಈ ಜಮೀನುಗಳಲ್ಲಿ 3 ಹಿಸ್ಸೆ ಮಾಡಿ ತೋರಿಸಬೇಕು ಎಂದು ನಮೂದು ಇತ್ತು ಎಂದರೆ ಸರಿ. ಇಂತ ಇಂತ ಭಾಗವನ್ನು ಇಂತಹ ಹಿಸ್ಸೆದಾರರಿಗೆ ಹಂಚಿಕೊಡಬೇಕು ಎಂಬ ನಿರ್ಧೇಶನ ಇರಲಿಲ್ಲ. ಸರ್ವೆ ನಂಬರ್ 15 ರಲ್ಲಿ ನಾನು ಇಂತ ಇಂತಹ ಹಿಸ್ಸೆದಾರರಿಗೆ ಈ ಬ್ಲಾಕ್ ಎಂದು ತೋರಿಸಿದ್ದು, ಇದನ್ನು ನಾನು ಬರೆದಿದ್ದೇನೆ ಎಂದರೆ ಸರಿ. ಸರ್ವೆ ನಂಬರ್ 14 ರಲ್ಲಿಯೂ ಈ ರೀತಿ ತೋರಿಸಿದ್ದೇನೆ ಎಂದರೆ ಸರಿ.

ಸರ್ವೆ ನಂಬರ್ 14 ಮತ್ತು 15 ಒಂದಕ್ಕೊಂದು ಹೊಂದಿಕೊಂಡಿರುವಂತಹ ಜಮೀನುಗಳು ಎಂದರೆ ಸರಿ. ಸರ್ವೆ ನಂಬರ್ 15 ರಲ್ಲಿ ನಾನು ವರದಿಯಲ್ಲಿ ತೋರಿಸಿದ ಹಾಗೇ ಪೂರ್ವ-ಪಶ್ಚಿಮದ ಈ ಜಮೀನಿನ ಅಳತೆ ಕಡಿಮೆ ಎಂದರೆ ಸರಿ. ಸರ್ವೆ ನಂಬರ್ 14 ರ ಉತ್ತರ ಭಾಗಕ್ಕೆ ಸರ್ವೆ ನಂಬರ್ 15 ಬರುತ್ತದೆ. ಸರ್ವೆ ನಂಬರ್ 14 ರ ದಕ್ಷಿಣದ ದಿಕ್ಕಿಗೆ ಗುಳ್ಳಾಪುರ ಗ್ರಾಮದ ಗಡಿ ಬರುತ್ತದೆ ಎಂದರೆ ಸರಿ. ಈ ರಸ್ತೆಯನ್ನು ರೈತರು ತಮ್ಮ ಜಮೀನುಗಳಿಗೆ ಓಡಾಡಲು ಉಪಯೋಗಿಸುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 15 ರ ದಕ್ಷಿಣದ ಭಾಗಕ್ಕೆ ನಾನು 2 ನೇ ಎದುರುದಾರ ನರೇಶ್ ಇವನ ಹಿಸ್ಸೆ ಕಾಣಿಸಿದ್ದೇವೆ ಎಂದರೆ ಸರಿ. ಸರ್ವೆ ನಂಬರ್ 14 ರ ಉತ್ತರ ಭಾಗಕ್ಕೆ 2 ನೇ ಎದುರುದಾರನಿಗೆ ಹಿಸ್ಸೆ ತೋರಿಸಿದ್ದೇನೆ ಎಂದರೆ ಸರಿ. ನಾನು ಅರ್ಜಿದಾರ ಮತ್ತು ಎದುರುದಾರರನ್ನು ವಿಚಾರಿಸಿ ಈ ಜಮೀನುಗಳಲ್ಲಿ, ಅರ್ಜಿದಾರ, 1 ನೇ ಎದುರುದಾರ ಮತ್ತು 2 ನೇ ಎದುರುದಾರ ಎಂದು ಕ್ರಮವಾಗಿ ಜಮೀನನ್ನು ಹಂಚಿಕೆ ಮಾಡಲು ನನಗೆ ಅವಕಾಶ ಇತ್ತು ಎಂದರೆ ಸರಿ. ಸರ್ವೆ ನಂಬರ್ 14 ರ ದಕ್ಷಿಣಕ್ಕೆ ರಸ್ತೆ ಬರುವ ಕಾರಣ ಒಂದು ವೇಳೆ ಉತ್ತರ ದಕ್ಷಿಣವಾಗಿ ಸರ್ವೆ ನಂಬರ್ 14 ಮತ್ತು 15 ನ್ನು ವಿಭಾಗ ಮಾಡಿದ್ದರೆ ಎಲ್ಲಾ ಹಿಸ್ಸೆದಾರರಿಗೂ ಅವರ ಜಮೀನಿಗಳಿಗೆ ಓಡಾಡಲು ರಸ್ತೆ ಅನುಕೂಲ ಆಗುತ್ತಿತ್ತು ಎಂದರೆ ಸರಿಯಲ್ಲ. ಈ ಜಮೀನುಗಳಿಗೆ ಹೋಗಲು ಏನಾದರೂ ನಿಮ್ಮ

ವರದಿಯಲ್ಲಿ ರಸ್ತೆ ಅಥವಾ ದಾರಿ ತೋರಿಸಿದ್ದೀರಿ ಎಂದರೆ ಸಾಕ್ಷಿ ಸರ್ವೆ ದಾಖಲೆಗಳ ಪ್ರಕಾರ ರಸ್ತೆ ಇರುವುದಿಲ್ಲ ಎಂದು ಹೇಳುತ್ತಾರೆ. ಸರ್ಕಾರದ ಸುತ್ತೋಲೆ ಪ್ರಕಾರ ಪ್ರತಿ ಒಂದು ಜಮೀನಿಗೆ ಹೋಗಲು ರಸ್ತೆಯ ಅನುಕೂಲ ಮಾಡಿಕೊಡಬೇಕು ಎಂದರೆ ಸರಿಯಲ್ಲ. ಸರ್ವೆ ನಂಬರ್ 14 ಮತ್ತು 15 ರಲ್ಲಿ ಉಳಿದ ಹಿಸ್ಸಾದಾರರಿಗೆ ಅವರವರ ಹಿಸ್ಸೆಗೆ ಹೋಗಲು ದಾರಿ ಕುರಿತು ನಾನು ಕಮೀಷನರ್ ವರದಿಯಲ್ಲಿ ನಮೂದಿಸಿಲ್ಲ.

ನಾನು ಸ್ಥಳ ತನಿಖೆ ಮಾಡಲು ಹೋದಾಗ ಯಾವ ಹಿಸ್ಸೆಯಲ್ಲಿ ರಸ್ತೆ ಬರಬಹುದು ಎಂದು ಗಮನಿಸಲಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಜಮೀನಿಗ ಹೋಗಲು ರಸ್ತೆಯ ವ್ಯವಸ್ಥೆ ಇಲ್ಲದೇ ಇದ್ದರೆ, ಉಳಿದವರ ಜಮೀನಿನ ಮೂಲಕ ಹಾದುಹೋಗಬೇಕಾದರೆ ಬೇರೆ ಜಮೀನಿನವರು ತಕರಾರು ಮಾಡುತ್ತಾರೆ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿಯ ಜಮೀನಿಗೆ ಹೋಗಲು ದಾರಿ ಇದ್ದರೆ ಬೇರೆ ಯಾವುದೇ ಘಲಾಟೆ ಆಗುವುದಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂಬರ್-19 ರಲ್ಲಿಯೂ 3 ಹಿಸ್ಸೆ ಮಾಡಿದ್ದೀರಿ ಎಂದರೆ ಸರಿ. ಸಾಮಾನ್ಯವಾಗಿ ಹಿಸ್ಸೆ ವಿಂಗಡಣೆ ಮಾಡಬೇಕಾದರೆ, ಮೊದಲಿಗೆ ವಾದಿ ನಂತರದಲ್ಲಿ 1 ಮತ್ತು 2 ನೇ ಪ್ರತಿವಾದಿ ಎಂದು ಹಿಸ್ಸೆ ವಿಂಗಡಣೆ ಆಗುತ್ತದೆ ಎಂದರೆ ಸರಿ. ಒಂದು ವೇಳೆ ಹಿಸ್ಸದಾರರು ಇದಕ್ಕೆ ಒಪ್ಪದೇ ಅವರವರ ಅನುಕೂಲಕ್ಕೆ ಬೇಕಾದ ಹಾಗೇ ಈ ರೀತಿ ವಿಂಗಡಣೆ ಮಾಡಿಕೊಡಿ ಎಂದು ಕೇಳಿದರೆ ಆ ರೀತಿ ವಿಂಗಡಣೆ ಮಾಡುತ್ತೇವೆ ಎಂದರೆ ಸರಿ.

ಈ ಅರ್ಜಿಯಲ್ಲಿ ಅರ್ಜಿದಾರ ಅಥವಾ ಎದುರುದಾರರು ಈ ರೀತಿಯಾಗಿ ಜಮೀನಿನ ವಿಂಗಡಣೆ ಮಾಡಿಕೊಡಿ ಎಂದು ಅರ್ಜಿ ಕೊಟ್ಟಿರಲಿಲ್ಲ. ನಾನು ಅಳತೆಮಾಡುವ ಸಮಯದಲ್ಲಿ ವಾದಿಯರು ಮತ್ತು ಪ್ರತಿವಾದಿಯರು ಇದ್ದರು. ವಾದಿ ಈ ಕಮೀಷನ್ ವರದಿಗೆ ಸಹಿ ಮಾಡಿದರು. ಪ್ರತಿವಾದಿಯರು ಸಹಿ ಮಾಡಲು ನಿರಾಕರಿಸಿದರು. ಸರ್ವೆ ನಂಬರ್ 19 ರಲ್ಲಿ ಮೊದಲನೇ ಬ್ಲಾಕ್ ವಾದಿಯ ಹಿಸ್ಸೆಗೆ ಕಾಣಿಸಿದ್ದೇನೆ ಎಂದರೆ ಸರಿ. 2 ನೇ ಹಿಸ್ಸೆಯನ್ನು 3 ನೇ

ಪ್ರತಿವಾದಿಗೆ ಕಾಣಿಸಿದ್ದೇನೆ ಎಂದರೆ ಸರಿ. 3 ನೇ ಭಾಗವನ್ನು 2 ನೇ ಪ್ರತಿವಾದಿಗೆ ಕಾಣಿಸಿದ್ದೇನೆ ಎಂದರೆ ಸರಿ.

ಕಮೀಷನರ್ ವಾರೆಂಟ್ ಬಂದ ನಂತರ ನಾನು ನ್ಯಾಯಾಲಯಕ್ಕೆ ಬಂದು ಯಾರಾರು ಅರ್ಜಿದಾರರು ಇದ್ದಾರೆ ಎಂದು ಕಡತ ಪರಿಶೀಲನೆ ಮಾಡಲಿಲ್ಲ, ಸಾಕ್ಷಿ ಅರ್ಜಿಯ ಪ್ರತಿ ಮತ್ತು ಡಿಕ್ರಿ ಪ್ರತಿ ಇತ್ತುಎಂದು ಹೇಳುತ್ತಾರೆ. ಸರ್ವೆ ನಂಬರ್ 15 ರಲ್ಲಿ ಪ್ರಾಥಮಿಕ ಡಿಕ್ರಿಯಲ್ಲಿ ತೋರಿಸಿದ ಜಮೀನಿನ ವಿಸ್ತೀರ್ಣ ಅಷ್ಟೇ ಇರುತ್ತದೆ ಎಂದರೆ ಸಾಕ್ಷಿ 5 ಗುಂಟೆ ಸ್ಥಾನಿಕವಾಗಿ ಕಡಿಮೆ ಇರುತ್ತದೆ ಎಂದು ಹೇಳುತ್ತಾರೆ. ಸದರಿ 5 ಗುಂಟೆಯಲ್ಲಿ ಎದುರುದಾರರು ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿ ಮನೆಗಳು ಇವೆ, ಅವು ಯಾರವು ಎಂದು ವಾದಿ ಮತ್ತು ಪ್ರತಿವಾದಿಯರು ಮಾಹಿತಿ ನೀಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರು ನಾನು ವಿಚಾರಿಸಿದಾಗ ಈ ಮನೆಗಳ ಬಗ್ಗೆ ಮಾಹಿತಿ ಕೊಡಲಿಲ್ಲ. ಈ ಮನೆಗಳನ್ನು ನನ್ನ ವರದಿಯಲ್ಲಿ ಕಾಣಿಸಿಲ್ಲ.

ಸರ್ವೆ ನಂಬರ್ 14 ಮತ್ತು 19 ರ ಜಮೀನಿನ ವಿಸ್ತೀರ್ಣ ಸರಿ ಇದೆ ಎಂದರೆ ಸರಿಯಲ್ಲ. ನಾನು 2 ನೇ ಎದುರುದಾರ ನರೇಶ್ ಈತನ ಮಾತುಕೇಳಿ ಆತನಿಗೆ ಬೇಕಾದ ಹಾಗೆ ಹಿಸ್ಸೆ ವಿಂಗಡೆಮಾಡಿ ತಪ್ಪು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನನಗೆ ಬಂದ ಕಮೀಷನರ್ ವರದಿಯ ಪ್ರಕಾರ ನನ್ನ ಕೆಲಸ ಪೂರೈಯಿಸಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ ಮತ್ತು ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರರಿಗೆ ಬೇಕಾದ ಹಾಗೇ, ಕಮೀಷನ್ ವಾರೆಂಟ್ ನಲ್ಲಿ ಯಾವುದೇ ನಿರ್ದೇಶನ ಇಲ್ಲದೇ ಇದ್ದರೂ, ಹಂಚಿಕೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 14 ರ ದಕ್ಷಿಣಕ್ಕೆ ರೈತರ ವಹಿವಾಟು ರಸ್ತೆ ಇದ್ದರೂ ನಾನು ರಸ್ತೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಮೀಷನರ್ ವಾರೆಂಟ್ ಪ್ರಕಾರ ವರದಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ಎದುರುದಾರರ ಪರ ವಕೀಲರನ್ನು ಕೂಗಿಸಲಾಯಿತು. ಗೈರು ಹಾಜರು ಇರುವ ಕಾರಣ ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**